# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಈಶಪ್ಪಾ ತಂದೆ ಬಸವರಾಜಪ್ಪ ರ್‍ಯಾಖಾ, ಸದಸ್ಯರು, (ಹಿಂದಿನ ಕಂಪ್ಯೂಟರ್ ಆಪರೇಟರ್) ಹೊನಗೇರಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ, ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43–ಎ ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಲೋಕಾಯುಕ್ತರ ಪತ್ರ ಸಂಖ್ಯೆ ಉಪಲೋಕ್/ಜಿಎಲ್‌ಬಿ–7742/2015/ಡಿಆರ್‌ಇ–3 ದಿನಾಂಕ:02.12.2016.
2. ಸರ್ಕಾರದ ಪತ್ರ ಸಂಖ್ಯೆ: ಸಂ:ಗ್ರಾಅಪ:862:ಗ್ರಾಪಂಅ:2016, ದಿನಾಂಕ:04.05.2017, ರ ಕಾರಣ ಕೇಳುವ ನೋಟಿಸ್ಸು.
3. ಶ್ರೀ ಈಶಪ್ಪಾ ತಂದೆ ಬಸವರಾಜಪ್ಪ ರ್‍ಯಾಖಾ, ಸದಸ್ಯರು, ಇವರು ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 29.07.2017
4. ವಿಚಾರಣೆಗೆ ಹಾಜರಾಗುವ ತಿಳುವಳಿಕೆ ಪತ್ರ ದಿನಾಂಕ: 25.07.2017.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಮಾನ್ಯ ಉಪಲೋಕಾಯುಕ್ತರು, ದಿನಾಂಕ:02.12.2016 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3) ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಶ್ರೀ ಈಶಪ್ಪಾ ತಂದೆ ಬಸವರಾಜಪ್ಪ ರ್‍ಯಾಖಾ, ಸದಸ್ಯರು, (ಹಿಂದಿನ ಕಂಪ್ಯೂಟರ್ ಆಪರೇಟರ್) ಹೊನಗೇರಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ, ಇವರು 2013-14 ನೇ ಸಾಲಿನಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ಅಡಿ ಈ ಹಿಂದೆ ಕಂಪ್ಯೂಟರ್ ಆಪರೇಟರ್ ಆಗಿ ಹೊನಗೇರಾ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆಯಲ್ಲಿ ನಡೆಸಿದ ಹಣಕಾಸು ದುರುಪಯೋಗಕ್ಕೆ ಸಂಬಂಧಪಟ್ಟಂತೆ ಸದರಿರವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದಡಿ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43-ಎ ರ ಅಡಿಯಲ್ಲಿ ಕ್ರಮ ವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟಿಸನ್ನು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಸದರಿಯವರು ಕಾರಣ ಕೇಳುವ ನೋಟಿಸ್ಸಿಗೆ ತಮ್ಮ ಲಿಖಿತ ಹೇಳಿಕೆಯಲ್ಲಿ, ಸದರಿಯವರು ಯಾವುದೇ ಸರ್ಕಾರದ ಹಣ ದುರುಪಯೋಗ ಪಡಿಸಿಕೊಂಡಿಲ್ಲವೆಂದು ಅವರ ವಿರುದ್ಧ, ಯಾದಗಿರಿ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಅಪರಾದ ಸಂಖ್ಯೆ:151/2015 ಸುಳ್ಳು ದೂರು ದಾಖಲಾಗಿರುವುದಾಗಿ ತಿಳಿಸಿರುತ್ತಾರೆ. ಓಂಬಡ್ಸಮನ್ ರವರ ವರದಿಯ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಪಿಟಿಷನ್ ಸಂಖ್ಯೆ: 21030–21031/2015 ದಾಖಲಿಸಿರುವುದಾಗಿ, ಸದರಿ ಪ್ರಕರಣದಲ್ಲಿ ಲೋಕಾಯುಕ್ತ ಶಿಫಾರಸ್ಸಿನಂತೆ ದಂಡನೆ ಮೊತ್ತ 24,360/- ಗಳನ್ನು ಕಟ್ಟಿರುವುದಾಗಿ, ಸದರಿಯವರು ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಮಾಣಿಕತೆ ತೋರಿರುವುದಾಗಿ ತಿಳಿಸಿರುತ್ತಾರೆ.

ಸದರಿಯವರು ಯಾವುದೇ ಸರ್ಕಾರದ ಹಣ ದುರುಪಯೋಗ ಪಡಿಸಿಕೊಂಡಿಲ್ಲವೆಂದು ಸದರಿ ಪ್ರಕರಣದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುತ್ತದೆಂದು ತಿಳಿಸಿರುತ್ತಾರೆ. ಸದರಿಯವರು ಗುತ್ತಿಗೆ ಆಧಾರದ ಮೇಲೆ 2007 ರಲ್ಲಿ ಹೋನಗೇರಾ ಗ್ರಾಮ ಪಂಚಾಯಿತಿಗೆ ನೇಮಕಗೊಂಡಿದ್ದು, ಸದರಿಯವರ ನೇಮಕಾತಿಯು ಕೆಲವು ಷರತ್ತುಗಳನ್ನು ಒಳಗೊಂಡಿರುವುದಾಗಿ, ಸದರಿಯವರ ಸ್ಥಾನವು ಗ್ರಾಮ ಪಂಚಾಯಿತಿಯಲ್ಲಿ ಸರ್ಕಾರಿ ನೌಕರರ ಸ್ಥಾನವಾಗಿಲ್ಲವೆಂದು, ದಿನಾಂಕ:30.04.2015 ರ ನಂತರ ಸದರಿಯವರು ಗ್ರಾಮ ಪಂಚಾಯಿತಿಯ ಕೆಲಸವನ್ನು ಬಿಟ್ಟಿರುವುದಾಗಿ, ತಾವೆ ಕೆಲಸವನ್ನು ತ್ಯಜಿಸಿರುವುದರಿಂದ ಅವರನ್ನು ಶಿಸ್ತು ಪ್ರಾಧಿಕಾರವು ಕೆಲಸದಿಂದ ವಜಾಗೊಳಿಸುವ ಪ್ರಮೇಯ ಉದ್ಭವಿಸುವುದಿಲ್ಲವೆಂದು ತಿಳಿಸಿರುತ್ತಾರೆ. ಸದರಿಯವರು ಗ್ರಾಮ ಪಂಚಾಯಿತಿಯ ಯಾವುದೇ ಶಾಶ್ವತವಾದ ಹುದ್ದೆ ಹೊಂದಿಲ್ಲದಿರುವುದರಿಂದ ಹಾಗೂ ಸದರಿಯವರು ಅವರ ಸೇವೆಯನ್ನು ಗ್ರಾಮ ಪಂಚಾಯಿತಿಯಲ್ಲಿ ಮುಂದುವರೆಸದೆ ಇರುವುದರಿಂದ ಅವರನ್ನು ಸ್ಥಳೀಯ ಪ್ರಾಧಿಕಾರದಿಂದ ಸೇವೆಯಿಂದ ವಜಾಗೊಳಿಸುವ ಪ್ರಶ್ನೆಯೆ ಉದ್ಭವಿಸುವುದಿಲ್ಲವೆಂದು ತಿಳಿಸಿರುತ್ತಾರೆ.

ಸದರಿಯವರ ಮೇಲಿನ ಆರೋಪವು ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಲ್ಲಿನ ಅವ್ಯವಹಾರಕ್ಕೆ ಸಂಬಂಧಪಟ್ಟಿದಾಗಿದ್ದು, ಈ ಯೋಜನೆಯಲ್ಲಿ ಎನ್‌ಎಮ್‌ಆರ್ ನಲ್ಲಿ ಕೂಲಿಕಾರರು ಸಹಿ ಹೊಂದಿರುತ್ತದೆ, ಎಮ್‌ಬಿ

ಪುಸ್ತಕದಲ್ಲಿ ಕಾಮಗಾರಿಯ ಪ್ರಗತಿ ಇದ್ದು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಅಧ್ಯಕ್ಷರು ಹಣ ಪಾವತಿಸುತ್ತಾರೆಂದು, ಇದೆ ಪ್ರಕರಣದ 2 ಕಾಮಗಾರಿಗಳು ಸರ್ವೆ ನಂ 26 ರ ಶಹಾಪೂರ ಗ್ರಾಮದಲ್ಲಿ ನಡದಿದ್ದು, ಅರಣ್ಯ ಇಲಾಖೆಯು ಅನುಷ್ಠಾನ ಇಲಾಖೆಯಾಗಿರುತ್ತದೆಂದು ತಿಳಿಸಿರುತ್ತಾರೆ. ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಅಧ್ಯಕ್ಷರ ಬಯೋ ಮ್ಯಾಟ್ರಿಕ್ ಇಂಪ್ರೆಷನ್ ಇಲ್ಲದೆ ಡಾಟಾ ಎಂಟ್ರಿ ಆಪರೇಟರ್ ಯಾವುದೇ ಕೆಲಸವನ್ನು ಮುಂದುವರೆಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಅವರ ಮೇಲಿನ ಆರೋಪವನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4) ರಲ್ಲಿ ಶ್ರೀ ಈಶಪ್ಪಾ ತಂದೆ ಬಸವರಾಜಪ್ಪ ರ್‍ಯಾಖಾ, ಸದಸ್ಯರು, (ಹಿಂದಿನ ಕಂಪ್ಯೂಟರ್ ಆಪರೇಟರ್) ಹೊನಗೇರಾ ಗ್ರಾಮ ಪಂಚಾಯಿತಿ, ರವರಿಗೆ ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರ ನೀಡಲಾಗಿದ್ದು, ಸದರಿಯವರು ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದ ವಿಚಾರಣೆಗೆ ಹಾಜರಿದ್ದು ತಮ್ಮ ಹೇಳಿಕೆ ನೀಡಿರುತ್ತಾರೆ.

ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ದಿನಾಂಕ:30.11.2017 ರಂದು ಉಪಲೋಕಾಯುಕ್ತರವರ ವರದಿ ಹಾಗೂ ಸದರಿಯವರು ನೀಡಿರುವ ಲಿಖಿತ ಹೇಳಿಕೆ ಹಾಗೂ ಸದರಿ ಪ್ರಕರಣದಲ್ಲಿರುವ ಎಲ್ಲಾ ದಾಖಲೆಗಳು ಹಾಗೂ ಎಲ್ಲಾ ಸಾಕ್ಷ್ಯಧಾರಗಳನ್ನು ಪರಿಶೀಲಿಸಿ ಸರ್ಕಾರವು ಈ ಪ್ರಕಣದಲ್ಲಿನ ವಾಸ್ತವಾಂಶಗಳನ್ನು ಮನದಟ್ಟು ಮಾಡಿಕೊಂಡು, ಸದರಿ ಚುನಾಯಿತ ಪ್ರತಿನಿಧಿಯು ಹಿಂದಿನ ಅವಧಿಯಲ್ಲಿ ದುರ್ನಡತೆ ಎಸಗಿರುವುದು ಕಂಡು ಬಂದಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದ ಪ್ರಕರಣ ಸಂಖ್ಯೆ:16860/2000 ಆದೇಶದನ್ವಯ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ಅನ್ವಯ ಸದಸ್ಯನು ಪ್ರಸ್ತುತ ಅವಧಿಯಲ್ಲಿ ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತಿರುವಾಗ ಎಸಗಿದ ದುರ್ನಡತೆಗೆ ಮಾತ್ರ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ಸದರಿಯವರು ಸದಸ್ಯರಾದ ಮೇಲೆ ಯಾವುದೇ ದುರ್ನಡತೆ ಇಲ್ಲವಾದ್ದರಿಂದ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳಲು ಬರುವುದಿಲ್ಲವಾಗಿರುತ್ತದೆ. ಆದುದರಿಂದ ಈ ಪ್ರಕರಣದಲ್ಲಿ ಸದರಿಯವರಿಂದ ದುರುಪಯೋಗವಾದ ಮೊತ್ತವನ್ನು ಖಚಿತಪಡಿಸಿಕೊಂಡು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 157(2) ಅಥವಾ 246(8) ರನ್ವಯ ಕ್ರಮವಹಿಸಿ ಸದರಿಯವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿ, ಶೇ.15 ರ ಬಡ್ಡಿಯೊಂದಿಗೆ ವಸೂಲಿ ಮಾಡಿ, ಸರ್ಕಾರಕ್ಕೆ ಮರುಜಮೆ ಮಾಡಲು ಅಗತ್ಯ ಕ್ರಮವಹಿಸುವಂತೆ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಯಾದಗಿರಿ ಜಿಲ್ಲೆರವರಿಗೆ ತಿಳಿಸುವಂತೆ ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/862/ಗ್ರಾಪಂಅ/2016</u>**

**<u>ಬೆಂಗಳೂರು, ದಿನಾಂಕ:-05-04-2018.</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಈಶಪ್ಪಾ ತಂದೆ ಬಸವರಾಜಪ್ಪ ರ್‍ಯಾಖಾ, ಸದಸ್ಯರು, (ಹಿಂದಿನ ಕಂಪ್ಯೂಟರ್ ಆಪರೇಟರ್) ಹೊನಗೇರಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ, ಇವರು ಹಿಂದಿನ ಅವಧಿಯಲ್ಲಿ ದುರ್ನಡತೆ ಎಸಗಿದ್ದು ಸದಸ್ಯರಾದ ಮೇಲೆ ಯಾವುದೇ ದುರ್ವರ್ತನೆ ಇಲ್ಲದಿರುವುದರಿಂದ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ರನ್ವಯ ಗ್ರಾಮ ಪಂಚಾಯಿತಿಯ ಸದಸ್ಯತ್ವವನ್ನು ತೆಗೆದು ಹಾಕಲು ಬರುವುದಿಲ್ಲವೆಂದು ಹಾಗೂ ಸದರಿಯವರಿಂದ ದುರುಪಯೋಗವಾದ ಮೊತ್ತವನ್ನು ಖಚಿತಪಡಿಸಿಕೊಂಡು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 157(2) ಅಥವಾ 246(8) ರನ್ವಯ ಕ್ರಮವಹಿಸಿ ಸದರಿಯವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿ, ಶೇ.15 ರ ಬಡ್ಡಿಯೊಂದಿಗೆ ವಸೂಲಿ ಮಾಡಿ, ಸರ್ಕಾರಕ್ಕೆ ಮರುಜಮೆ ಮಾಡಲು ಅಗತ್ಯ ಕ್ರಮವಹಿಸುವಂತೆ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಯಾದಗಿರಿ ಜಿಲ್ಲೆರವರಿಗೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್) 6/4
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ,

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಯಾದಗಿರಿ ಜಿಲ್ಲೆ.

2. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. ಮಾಹಿತಿಗಾಗಿ.
4. ಶ್ರೀ ಈಶಪ್ಪಾ ತಂದೆ ಬಸವರಾಜಪ್ಪ ರ್‍ಯಾಖಾ, ಸದಸ್ಯರು, (ಹಿಂದಿನ ಕಂಪ್ಯೂಟರ್ ಆಪರೇಟರ್) ಹೊನಗೇರಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ.
5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹೊನಗೇರಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
7. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.